ದಿನಾಂಕಃ 07.05.2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ 2ನೇ ಎದುರುದಾರರ ಪರಃ ಶ್ರೀ ಯು ಎಸ್ ಎನ್ ವಕೀಲರಿಂದಃ

ನಾನು ನಡೆದುಕೊಂಡು ಹೋಗುವಾಗ ಬೈಕ್ ಬಂದು ಅಪಘಾತಪಡಿಸಿದೆ. ಬೈಕು ಅತಿವೇಗವಾಗಿ ಬರುತ್ತಿತ್ತು. ಅಪಘಾತ ಡಾಂಬರು ರಸ್ತೆಯ ಮೇಲೆ ಆಗಿಲ್ಲ ಮಣ್ಣು ರಸ್ತೆಯ ಮೇಲೆ ಆಗಿತ್ತು. ನ್ಯಾಯಾಲಯಕ್ಕೆ ಸಲ್ಲಿಸಿರುವ ನಿಪಿ 4 ರಲ್ಲಿ ನಮೂದಿಸಿರುವ ಅಂಶಗಳು ಸರಿ ಇರುತ್ತವೆ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಬೈಕ್ ಚಾಲಕನ ತಪ್ಪಿನಿಂದ ಅಗಿಲ್ಲ ಎಂದರೆ ಸರಿಯಲ್ಲ. ನಾನು ರಸ್ತೆ ದಾಟುವಾಗ ಅಪಘಾತ ಆಗಿದೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಬಲಗಾಲಿನ ಮಂಡಿಗೆ ಪೆಟ್ಟಾಗಿದೆ. ನಾನು ಉಜಿರೆಯ ಧರ್ಮಸ್ಥಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನಾನು 10 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೇನೆ. ನನಗೆ ವೈದ್ಯರಾದ ದೇವೇಂದ್ರ ಕುಮಾರವರು ಚಿಕಿತ್ಸೆ ನೀಡಿದ್ದಾರೆ. ವೈದ್ಯಕೀಯ ಖರ್ಚಿನ ಸಂಬಂಧ ವಿಮೆ ಕ್ಲೇಮ್ ಆಗಿಲ್ಲ. ನಾನು ಸ್ವತಃ ಹಣವನ್ನು ಖರ್ಚು ಮಾಡಿದ್ದೇನೆ. ನನ್ನ ವಾಕ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಹಣ ನನ್ನ ವೈದ್ಯಕೀಯ ಚಿಕಿತ್ಸೆಗಾಗಿ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ. ನಿಪಿ8ರಲ್ಲಿ ನಮೂದಿಸಿರುವಷ್ಟು ಶಾಶ್ವತ ಅಂಗನ್ಯೂತೆ ನನಗೆ ಆಗಿಲ್ಲ ಎಂದರೆ ಸರಿಯಲ್ಲ.

ನನಗೆ ಈಗ 72-76 ವರ್ಷ ವಯಸ್ಸಾಗಿರಬಹುದು. ನಿರ್ದಿಷ್ಟವಾಗಿ ಎಷ್ಟು ಎಂದು ಹೇಳಲು ಆಗುವುದಿಲ್ಲ. ನನಗೆ ಈಗ 80 ಕ್ಕೂ ಹೆಚ್ಚು ವಯಸ್ಸಾಗಿದೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಕೂಲಿ ಕೆಲಸ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕೆಲಸದಿಂದ ತಿಂಗಳಿಗೆ 20,000/- ಆದಾಯ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ನಾನು ಕೂಲಿ ಕೆಲಸ ಮಾಡುತ್ತೇನೆ ಎಂದು ಹಾಗೂ ಅದರಿಂದ ಆದಾಯ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಎಂ.ವಿ.ಸಿ. ನಂಃ 945/2024, P.W.-1**

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು